ಶ್ರೀ ಬಿ. ಪಿ. ನಾಗರಾಜಮೂರ್ತಿ.—ಇಂಥ ಪರಿಸ್ಥಿತಿಯಲ್ಲಿ ಆ ಪ್ರದೇಶವನ್ನು ಇಲ್ಲಿಯೇ ಉಳಿಸಿಕೊಳ್ಳಬೇಕೆಂದು ಪತ್ರ ಬರೆಯದೆ ಇದ್ದರೆ ಮೈಸೂರಿನ ಘನತೆ ಗೌರವಕ್ಕೆ ಕುಂದಕ ಬರುವುದಿಲ್ಲವೇ?

(ಉತ್ತರವಿಲ್ಲ.)

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಎಸ್. ಆರ್. ಸಿ. ಸಮಿತಿಯವರು ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಸೇರಿಸುವುದರಲ್ಲಿ ದಾರಿಯಲ್ಲಿ ಹೋಗುತಕ್ಕ ಜನಗಳ ಮಾತನ್ನು ಕೇಳಿಕೊಂಡು ಮಾಡಿದರು ಎಂದು ಅಪ್ಪಣೆಯಾಯಿತು. ಈ ರಿಪೋರ್ಟು ಕೂಡ ದಾರಿಯಲ್ಲಿ ಹೋಗತಕ್ಕ ಜನಗಳ ಮಾತನ್ನು ಕೇಳಿ ತಾನೆ ತಯಾರಾಗಿದೆ?

ಶ್ರೀ ಕೆ. ಹನುಮಂತಯ್ಯ.—ಹಾಗೆ ನಾನು ಹೇಳಲಿಲ್ಲ. ಕರ್ನೂಲಿಗೆ ಹೋಗುವಾಗ ದಾರಿಯಲ್ಲಿ ಈ ವಿಷಯ ಕೇಳಿಕೊಂಡು ಮಾಡಿದರು ಎಂದು ಹೇಳಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಬಳ್ಳಾರಿಯನ್ನು ಮೈಸೂರಿನೊಡನೆ ವಿಲೀನಗೊಳಿಸುವ ನಂದರ್ಭದಲ್ಲಿ ಈ ಸಭೆಯ ಸರ್ವಾನುಮತದ ಅಭಿಪ್ರಾಯದ ಮೇರೆಗೆ ಮಾಡಿದೆವು ಎಂದು ಹೇಳಿದಿರಿ. ಸಭೆ ಸರ್ವಾನುಮತದ ಅಭಿಪ್ರಾಯಕ್ಕೆ ಬಂತೇ?

ಶ್ರೀ ಕೆ. ಹನುಮಂತಯ್ಯ.—ಸರ್ವಾನುಮತದಿಂದ ಈ ಸಭೆ ತೀರ್ಮಾನ ಮಾಡಿದೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಆ ರೀತಿ ತೀರ್ಮಾನ ಮಾಡುವಾಗ ನಾವು ಆ ರೀತಿ ಒಪ್ಪುವುದಿಲ್ಲ ವೆಂದು ಹೇಳಿದ್ದು ತಮಗೆ ಜ್ಞಾಪಕವಿಲ್ಲವೆ?

ಶ್ರೀ ಕೆ. ಹನುಮಂತಯ್ಯ.—ತಾವು ಹಾಗೆ ಹೇಳಿದ್ದು ನನಗೆ ಜ್ಞಾಪಕವಿಲ್ಲವಲ್ಲ.

Harijankeri, Yerrakote Village (extension).

Q.—610. **Sri J. NARAYANAPPA** (Chintamani—Scheduled Castes).—

Will the Government be pleased to state:—

(*a*) since when the acquisition records are being worked up in regard to the extension of Harijankeri, Yerrakote Village, Murugamalla Hobli, Chintamani Taluk;

(*b*) whether the hardships caused to the Harijans due to lack of space for constructing houses have come to their notice?

A.—**Sri K. HANUMANTHAIYA** (Chief Minister).—

(*a*) Since 1950-51.

(*b*) Yes.

ಶ್ರೀ ಜೆ. ನಾರಾಯಣಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ 1950-51ನೆಯ ಸಾಲಿನಿಂದ ರಿಕಾರ್ಡ್ ನಡೆಯುತ್ತಿದೆಯೆಂದು ಹೇಳಿದ್ದೀರಿ. ಇಷ್ಟು ಸಾವಕಾಶವಾಗಲು ಕಾರಣವೇನು?

Sri T. CHANNIAH.—Action is being taken regarding acquisition for village extension.

ಶ್ರೀ ಜೆ. ನಾರಾಯಣಪ್ಪ.—ಇಷ್ಟು ಸಾವಕಾಶವಾದರೆ ಹೇಗೆ? ಮೂರು ನಾಲ್ಕು ವರ್ಷಗಳು ಒಂದೊಂದು ಅಕ್ವಿಸಿಷನ್ ನಡೆವಳಿಕೆ ನಡೆದರೆ ಹರಿಜನರಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಪಾರ್ಟಿಗಳಿದ್ದರೆ ಕಷ್ಟವಾಗುತ್ತದೆ. ಆದರೂ ನೀವು ಹೇಳುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಜಾಗ್ರತೆಯಾಗಿ ಅದಕ್ಕೆ ಬೇಕಾದ ನ್ಯಳವನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—ಇನ್ನೂ ಎಷ್ಟು ದಿವಸ ಬೇಕು?

ಶ್ರೀ ಟಿ. ಚನ್ನಯ್ಯ.—ಜಾಗ್ರತೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಈ ಅಕ್ವಿಸಿಷನ್ ಕಾರ್ಯಕ್ರಮ 1950ನೆಯ ಇಸವಿಯಿಂದ pendingನಲ್ಲಿದೆಯೆಂದು ಹೇಳಿದ್ದೀರಿ. ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಮುಖ್ಯವಾದ ಕಾರಣ, ಆ ಜಮೀನ್ದಾರರು ಜಮೀನನ್ನು ಬಿಟ್ಟುಕೊಡುವುದಕ್ಕೆ ಇಷ್ಟಪಡುವುದಿಲ್ಲ. ಮತ್ತು ಆ ಊರಿನಲ್ಲೇ ಕೆಲವರು ಆ ಜಾಗಬೇಕೆಂದು ಹೇಳಿದರೆ, ಕೆಲವರು ಆ ಜಾಗ ಬೇಡ ಎಂದು ಹೇಳುತ್ತಿದ್ದಾರೆ. ಹೀಗೆ ಎರಡು ಪಂಗಡಗಳಿರುವುದರಿಂದ ಅಕ್ವೈರ್ ಮಾಡುವುದು ನಿಧಾನವಾಯಿತು.

ಶ್ರೀ ಎಸ್ ಸಿದ್ದಪ್ಪ.—ಇಂಥ ನಂದರ್ಭಗಳಲ್ಲಿ spot inspection ಮಾಡಿ ಬೇಗ ಇತ್ಯರ್ಥ ಮಾಡುತ್ತೀರಾ?

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಹಿಂದುಳಿದ ಪಂಗಡದವರಿಗೆ ಈಗಿರುವ ಅಕ್ವಿಸಿಷನ್ ಕ್ರಮದಿಂದ ಜಾಗ ಸಿಕ್ಕುವುದು ಬಹಳ ನಿಧಾನವಾಗಿ ತುಂಬ ತೊಂದರೆಯಾಗುತ್ತಿದೆಯೆಂಬುದು ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ಅಕ್ವಿಸಿಷನ್ ಕ್ರಮ ನಿಧಾನವಾಗುತ್ತಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈಗಿರತಕ್ಕ ಅಕ್ವಿಸಿಷನ್ ಕ್ರಮವನ್ನೇ ಬದಲಾವಣೆಮಾಡಿ ಜಾಗ್ರತೆ ಕನಿಷ್ಠಪಕ್ಷ ಆರು ತಿಂಗಳಿನಲ್ಲೇ ಅಕ್ವಿಸಿಷನ್ ಪೂರ್ತಿಯಾಗುವಂತೆ ಮಾಡುವರೆಂದು ಸರ್ಕಾರದವರು ಭರವಸೆ ಕೊಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆ ಅಕ್ವೈರ್ ಮಾಡುತ್ತೇವೆಂದು ಭರವಸೆ ಕೊಡುತ್ತೇವೆ.

Reforms in University Education.

Q.—52. **Sri H. C. LINGA REDDY** (Malur).—

Will the Government be pleased to state:—

the steps taken by them to introduce educational reforms as regards University Education?

A.—Sri A. G. RAMACHANDRA RAO (Minister for Law and Education).—

The University Bill, 1955, to provide for the reorganisation of the University of Mysore is before the Legislature.

Sri H. C. LINGA REDDY.—Have the Government taken any decision with regard to the commencement of academic year for the University just as they have done in the case of other educational institutions ?

*Sri A. G. RAMACHANDRA RAO.—No, Sir.

Sri H. C. LINGA REDDY.—Will the Government propose to do that ?

Sri A. G. RAMACHANDRA RAO.—It is the function of the University, Sir.

Sri H. C. LINGA REDDY.—Have the Government taken any decision with regard to the holidays for the University, Sir, so far ?

Sri A. G. RAMACHANDRA RAO.—Even the holidays are regulated by the University.

Sri H. C. LINGA REDDY.—If the commencement of the academic year and the holidays for the University and other educational institutions have diverged, will it not come in conflict with each other, causing inconvenience to the students ?

Sri A. G. RAMACHANDRA RAO.—There will be some difficulty. There should be some divergence.

Sri H. C. LINGA REDDY.—When do the Government propose to get over the difficulty ?

Sri A. G. RAMACHANDRA RAO.—We will take up the question at the proper time.

Sri H. C. LINGA REDDY.—It is stated that a Bill has been introduced here. Do the Government think that the Select Committee will prepare the Report and place it for discussion in this session itself ?

Sri A. G. RAMACHANDRA RAO.—I do not know the possibility of it. Possibly, it will have to be taken up at the next session.

Government Adikarnataka Girls' Boarding House, Mysore.

Q.—125. Sri R. MUNISWAMIAH (Bangalore North-Scheduled Castes).—

Will the Government be pleased to state:—

(*a*) the condition of the rented building in which the Government Adikarnataka Girls' Boarding Home is being run in Mysore City ;

(*b*) the names with dates of visit of officers that visited the Boarding Home since June 1952 ;

(*c*) whether any Minister visited that Boarding Home ?

A.—Sri A. G. RAMACHANDRA RAO (Minister for Law and Education).—

(*a*) It is not satisfactory.

(*b*) The District Educational Officer, Mysore, and the Director of Public Instruction in Mysore, Bangalore. Information as to the dates on which they visited the Boarding Home is not readily available.

(*c*) Yes.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಹಾಸ್ಟಲನಲ್ಲಿ ವಿಜಿಟರ್ಸ್ ಪುಸ್ತಕ ಒಂದನ್ನು ಇಟ್ಟಿಲ್ಲವೇ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇಟ್ಟಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದರೆ ವಿಜಿಟ್‌ಮಾಡಿದ ತಾರೀಖು ಗೊತ್ತಾಗುವುದಿಲ್ಲವೆಂದು ಏಕೆ ತಿಳಿಸಿದ್ದೀರಿ ?

Sri A. G. RAMACHANDRA RAO.—Information was not readily available at the time of answering the question.

ಶ್ರೀ ಆರ್. ಮುನಿಸ್ವಾಮಯ್ಯ.—(ಸಿ) ಪ್ರಶ್ನೆಗೆ ಉತ್ತರವಾಗಿ 'ಕೊಟ್ಟಿದ್ದಾರೆ' ಎಂದು ಹೇಳಿದೆ. ಅಲ್ಲಿಗೆ ಯಾವಯಾವ ಮಂತ್ರಿಗಳು ಬೇಟಿಕೊಟ್ಟಿದ್ದರು ?

Sri A. G. RAMACHANDRA RAO.—The Hon'ble Minister for Local Self-Government and Public Health.

ಶ್ರೀ ಆರ್. ಮುನಿಸ್ವಾಮಯ್ಯ.—'ಈ ಹಾಸ್ಟಲ್ ಬಿಲ್ಡಿಂಗ್ ತೃಪ್ತಿಕರವಾದ ಸ್ಥಿತಿಯಲ್ಲಿಲ್ಲ. ಇದನ್ನು ಬೇರೆ ಕಟ್ಟಡಕ್ಕೆ ಬದಲಾಯಿಸಲಾಗುವುದು' ಅಂತ ತಿಳಿಸಿದ್ದೀರಿ. ಬೇರೆ ಕಟ್ಟಡದ ಏ ಪಾ ರ್ ಡು ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಬದಲಾಯಿಸುವುದಕ್ಕೆ ಮತ್ತು ಬೇರೆ ಕಟ್ಟಡವನ್ನು ಸಿದ್ಧಪಡಿಸಿಕೊಳ್ಳಲಿಕ್ಕೆ ತಿಳಿಸಿದೆ. ಸದ್ಯದಲ್ಲೇ ಇದನ್ನು ಬೇರೆ ಕಟ್ಟಡಕ್ಕೆ ವರ್ಗಾಯಿಸಲಾಗುತ್ತದೆ.

ಶ್ರೀ ಬಿ. ರಾಚಯ್ಯ —ಈಗ ಇರತಕ್ಕದ್ದು ಜಟ್ಕಾ ಸ್ಟ್ಯಾಂಡ್‌ಬಳಿ ಬಹಳ ಗಲೀಜಾದ ಸ್ಥಳದಲ್ಲಿರುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೆ ?

* Indicates that the remarks or speeches have not been revised by the Member concerned.